ಪೂರ್ವ ಕಾಲುವೆಯಿಂದ ಏತ ನೀರಾವರಿ ಮೂಲಕ ನೀರನ್ನು ಒದಗಿಸಲು ಯೋಜಿಸಲಾಗಿದೆ. ಇದರಿಂದ ಕರೀಮಸೂತಿ ಏತ ನೀರಾವರಿ ಯೋಜನೆಗೆ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇರುವುದಿಲ್ಲ.

ಊ) ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯು ಹಿಪ್ಪರಗಿ ಯೋಜನೆಯ ಭಾಗವಾಗಿದ್ದು ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ ಅಡಿಯಲ್ಲಿ, ಹಿಪ್ಪರಗಿ ಯೋಜನೆಗೆ 12.10 ಟಿಎಂಸಿ ನೀರಿನ ಹಂಚಿಕೆ ಆಗಿರುತ್ತದೆ. ಆದುದರಿಂದ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಹಿಪ್ಪರಗಿ ಜಲಾಶಯದಡಿ ಶೇಖರಿಸಿದ ನೀರನ್ನೇ ಈ ಯೋಜನೆಗೆ ಉಪಯೋಗಿಸಬೇಕಾಗುತ್ತದೆ.

ಋ) ಸದರಿ ಯೋಜನೆಗಳಡಿ ಅಳವಡಿಸಿದ ಬೆಳೆಪದ್ಧತಿಗೆ ಅನುಸಾರವಾಗಿ ಬೇಕಾದ ನೀರಿನ ಪ್ರಮಾಣವನ್ನು ಗಣನೆಯಲ್ಲಿರಿಸಿಕೊಂಡು ಹಿಪ್ಪರಗಿ ನೀರಾವರಿ ಯೋಜನೆಯನ್ನು ಮಾರ್ಪಡಿಸಲಾಗಿದ್ದು, ಹಾಗೂ ಹಿಪ್ಪರಗಿ ಯೋಜನೆಗೆ ಬೇಕಾಗುವ ಒಟ್ಟಾರೆ ನೀರಿನ ಪ್ರಮಾಣ 12.10 ಟಿಎಂಸಿ ಆಗಿದೆ. ಆದುದರಿಂದ ಈ ಯೋಜನೆಗಳಿಗೆ ಬೇಕಾಗುವಷ್ಟು ನೀರು ಹಿಪ್ಪರಗಿ ಬ್ಯಾರೇಜಿನಿಂದ ಲಭ್ಯವಾಗುವುದು.

ಋ) ಹಿಪ್ಪರಗಿ ಯೋಜನೆ ಅಡಿ ಬರುವ ಹಲ್ಯಾಳ ಪೂರ್ವ ಕಾಲುವೆಯ ಕಿಮೀ. 20 ರಲ್ಲಿ ನೀರನ್ನು ಎತ್ತಿ ಕರೀಮಸೂತಿ ಏತ ನೀರಾವರಿಯಡಿ ಬರುವ ಪೂರ್ವ ಮತ್ತು ಪಶ್ಚಿಮ ಕಾಲುವೆಗಳ ಮೂಲಕ ಮತ್ತು ಇದೇ ಹಲ್ಯಾಳ ಪೂರ್ವ ಕಾಲುವೆಯ ಕಿಮೀ. 39.986 ರಲ್ಲಿ ನೀರನ್ನು ಎತ್ತಿ ಸಾವಳಗಿ–ತುಂಗಳ ಏತ ನೀರಾವರಿ ಅಡಿ ಬರುವ ಪೂರ್ವ ಮತ್ತು ಪಶ್ಚಿಮ ಕಾಲುವೆಗಳಿಂದ ಹನಿ ನೀರಾವರಿ ಮೂಲಕ ನೀರನ್ನು ಒದಗಿಸಲಾಗುವುದು.

ಎ) ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ ನೀರಿನ ಹಂಚಿಕೆಯಂತೆ ಹಿಪ್ಪರಗಿ ನೀರಾವರಿ ಯೋಜನೆಗೆ ನಿಗದಿಗೊಳಿಸಲಾದ ನೀರಿನ ಹಂಚಿಕೆಯಲ್ಲೇ ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

535(782) ಶ್ರೀ ಸಿದ್ದುಸವದಿ (ಜಮಖಂಡಿ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲೂಕಿನಲ್ಲಿರುವ ಜಿ.ಎಲ್.ಬಿ.ಸಿ.ಯ ಹಂಚು ಕಾಲುವೆಗಳು ಮತ್ತು ಸರ್ವಿಸ್ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸುಮಾರು ಹತ್ತು ವರ್ಷಗಳಿಂದ ದುರಸ್ತಿಯಾಗದೇ ರೈತರಿಗೆ ನೀರು ದೊರೆಯದಂತಾಗಿರುವುದು ಹಾಗೂ ರಸ್ತೆಗಳ ಮೇಲೆ ಅಡ್ಡಾಡದಂತಹ ಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಎರಡೂ ಕಾರ್ಯಗಳನ್ನು ಯಾವಾಗ ಸರಿಪಡಿಸಲಾಗುವುದು;

ಈ) ಜಮಖಂಡಿ ತಾಲ್ಲೂಕಿನಲ್ಲಿ ನೀರು ಬಳಕೆದಾರರ ಸಂಘಗಳ ಸಂಖ್ಯೆ ಎಷ್ಟು (ಬಳಕೆದಾರರ ಸಂಘಗಳ ಪಟ್ಟಿಯನ್ನು ನೀಡುವುದು);

ಉ) ಅವುಗಳ ಜವಾಬ್ದಾರಿ ಹಾಗೂ ಕಾರ್ಯವ್ಯಾಪ್ತಿಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಬಂದಿದೆ. ಸದರಿ ಕಾಲುವೆ ಹಾಗೂ ಸರ್ವಿಸ್ ರಸ್ತೆಗಳ ದುರಸ್ತಿಗಾಗಿ ಪ್ರತಿ ವರ್ಷ 2701 ಹಾಗೂ 3054 ಶೀರ್ಷಿಕೆಯಡಿ ಅನುದಾನವನ್ನು ನೀಡಲಾಗುತ್ತಿದ್ದು, ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಪ್ರತಿ ವರ್ಷ 2701 ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಂಡು ಕಾಲುವೆ ಕೊನೆಯ ಭಾಗಕ್ಕೆ ನೀರು ತಲುಪಿಸಲಾಗುತ್ತಿದೆ. ಈ ಹಿಂದೆ ಲೈನಿಂಗ್ ಆಗದ ಕಾಲುವೆಗಳ ಲೈನಿಂಗ್‌ಗಳಿಗಾಗಿ 4701 ಶೀರ್ಷಿಕೆಯಡಿ ಅನುದಾನ ಒದಗಿಸಿದ್ದು, ಎಲ್ಲ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಿದ್ದು, ಕೆಲಸವು ಪ್ರಗತಿಯಲ್ಲಿರುತ್ತವೆ.

ಇ) ದುರಸ್ತಿ ಹಾಗೂ ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಈ) ಜಮಖಂಡಿ ತಾಲೂಕಿನಲ್ಲಿ ಒಟ್ಟು 26 ನೀರು ಬಳಕೆದಾರರ ಸಹಕಾರ ಸಂಘಗಳಿವೆ. ಅವುಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) ನೀರು ಬಳಕೆದಾರರ ಸಹಕಾರ ಸಂಘವು ಘನ ಅಳತೆಯ ಆಧಾರದ ಮೇಲೆ ನಿಗಮದಿಂದ ನೀರನ್ನು ಪಡೆದುಕೊಂಡು ಅದನ್ನು ಸದಸ್ಯರು ಮತ್ತು ಸದಸ್ಯೇತರರಿಗೆ ಹಂಚ ಬೇಕಾಗಿರುತ್ತದೆ. ನಿಗಮವು ಘನ ಅಳತೆ ಆಧಾರದ ಮೇಲೆ ಸಂಘಗಳಿಗೆ ನೀರನ್ನು ಪೂರೈಸಬೇಕಾಗಿದ್ದು, ಇದಕ್ಕೆ ಸಂಘಗಳು 1000 ಘ.ಮೀ.ಗೆ ರೂ. 12.00ರಂತೆ ನೀರಿನ ದರವನ್ನು ಪಾವತಿಸಬೇಕಾಗಿರುತ್ತದೆ. ನೀರು ಬಳಕೆದಾರರ ಸಹಕಾರ ಸಂಘವು ತನ್ನ ಕಾರ್ಯವ್ಯಾಪ್ತಿಯಲ್ಲಿ ಬರುವ ವಿತರಣೆ/ಉಪಕಾಲುವೆ/ ಹಂಚುಕಾಲುವೆ/ಇತರೆ ನಿರ್ಮಾಣಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳಿಗೆ ಆಗುವ ವೆಚ್ಚವನ್ನು ಭರಿಸಲು ಹೆಕ್ಟೇರ್‌ಗೆ 1 ವರ್ಷಕ್ಕೆ ರೂ. 40.00ರಂತೆ ನಿಗಮದಿಂದ ಪಡೆಯಲು ಅರ್ಹವಿರುತ್ತದೆ ಹಾಗೂ ಸಂಘದ ಸಾಮಾನ್ಯ ನಿರ್ವಹಣೆ ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ನಿಗಮಕ್ಕೆ ನೀಡಬೇಕಾದ ನೀರಿನ ಬಿಲ್ಲಿನ ಬಾಬ್ತಿನಲ್ಲಿ ಶೇ 20 ರಷ್ಟನ್ನು ಉಳಿಸಿಕೊಳ್ಳಲು ಅವಕಾಶವಿರುತ್ತದೆ. ನೀರು ಬಳಕೆದಾರರ ಸಹಕಾರ ಸಂಘವು ಮಹಾಸಭೆಯಲ್ಲಿ ನಿಗದಿಪಡಿಸಿದಂತೆ ಸದಸ್ಯರುಗಳಿಗೆ ಬೆಳೆವಾರು ನೀರಿನ ಶುಲ್ಕಗಳನ್ನು ವಿಧಿಸಿ ವಸೂಲಿ ಮಾಡುವ ಹಕ್ಕನ್ನು ಹೊಂದಿರುತ್ತದೆ. ನೀರು ಬಳಕೆದಾರರ ಸಹಕಾರ ಸಂಘವು ಅದರ ಕಾರ್ಯವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ

ವಾಸ್ತವಿಕ ವ್ಯವಸ್ಥೆಯ/ಕ್ಷೇತ್ರ ಕಾಳುವೆ ಮತ್ತು ಇತರ ನಿರ್ಮಾಣಗಳೂ ಸೇರಿದಂತೆ ನಿರ್ವಹಣೆ ಮತ್ತು ದುರಸ್ತಿಯನ್ನು ಮಾಡಬೇಕಿರುತ್ತದೆ. ನೀರು ಬಳಕೆದಾರರ ಸಹಕಾರ ಸಂಘಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕ್ಷೇತ್ರ ಕಾಲುವೆ ಮತ್ತು ಅಡ್ಡಮೋರಿಗಳಲ್ಲಿ ಸಾಮಾನ್ಯ ನಿರ್ವಹಣಾ ಕಾರ್ಯಗಳಾದ ಹೂಳು ತೆಗೆಯುವಿಕೆ, ಗಿಡಗಂಟೆ ತೆಗೆಯುವಿಕೆ, ಮಾಪಕಗಳನ್ನು ರಕ್ಷಿಸುವುದು, ನಿರ್ಮಾಣಗಳನ್ನು ಸುಸ್ಥಿತಿಯಲ್ಲಿ ಕಾಪಾಡುವುದು ಇತ್ಯಾದಿಗಳನ್ನು ನಿರ್ವಹಿಸಬೇಕಾಗಿರುತ್ತದೆ. ನೀರು ಬಳಕೆದಾರರ ಸಹಕಾರ ಸಂಘವು ಅದರ ಸದಸ್ಯರಿಗೆ ಮತ್ತು ಇತರ ನೀರು ಬಳಕೆದಾರರಿಗೆ ನೀರಿನ ನಿರ್ವಹಣೆಯಲ್ಲಿ ಆಧುನಿಕ ನೀರಾವರಿ ಮತ್ತು ಕೃಷಿ ತಂತ್ರಗಳ ಬಳಕೆಯ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ಕೈಗೊಳ್ಳಬೇಕಿರುತ್ತದೆ. ನೀರು ಬಳಕೆದಾರರ ಸಹಕಾರ ಸಂಘವು ನೀರಿನ ಲಭ್ಯತೆಯನ್ನು ಗಮನಿಸಿ ಮಹಾಸಭೆಯಲ್ಲಿ ಈ ಋತುಮಾನದ ಬೆಳೆಗಳ ಮಾದರಿಯನ್ನು ನಿರ್ಧರಿಸಬೇಕಾಗಿರುತ್ತದೆ.

ಅನುಬಂಧ

ಜಮಖಂಡಿ ತಾಲ್ಲೂಕಿನಲ್ಲಿರುವ ನೀರು ಬಳಕೆದಾರರ ಸಹಕಾರ ಸಂಘಗಳ ಪಟ್ಟಿ.

1) ನೀರು ಬಳಕೆದಾರರ ಸಹಕಾರ ಸಂಘ ತೇರದಾಳ
2) ಬಸವೇಶ್ವರ ಬಳಕೆದಾರರ ಸಹಕಾರ ಸಂಘ ಗೋಲಭಾವಿ
3) ಬೀರಸಿದ್ದೇಶ್ವರ ಬಳಕೆದಾರರ ಸಹಕಾರ ಸಂಘ ಗೋಲಭಾವಿ
4) ಶಿವಲಿಂಗೇಶ್ವರ ಬಳಕೆದಾರರ ಸಹಕಾರ ಸಂಘ ಸಸಾಲಟ್ಟಿ
5) ಹನುಮಾನ ಬಳಕೆದಾರರ ಸಹಕಾರ ಸಂಘ ಹೊಸೂರು
6) ಲಕ್ಷ್ಮಿ ಬಳಕೆದಾರರ ಸಹಕಾರ ಸಂಘ ಹೊಸೂರು
7) ಸಂಗಮೇಶ್ವರ ಬಳಕೆದಾರರ ಸಹಕಾರ ಸಂಘ ಚಿಮ್ಮಡ
8) ಕಾಡಸಿದ್ದೇಶ್ವರ ಬಳಕೆದಾರರ ಸಹಕಾರ ಸಂಘ ಬನಹಟ್ಟಿ
9) ಸರ್ವೋದಯ ಬಳಕೆದಾರರ ಸಹಕಾರ ಸಂಘ ತೇರದಾಳ
10) ನೀರು ಬಳಕೆದಾರರ ಸಹಕಾರ ಸಂಘ ನಿಯಮಿತ, ಕುಲ್ಲಳ್ಳಿ
11) ವಿಕ್ರಮ ಬಳಕೆದಾರರ ಸಹಕಾರ ಸಂಘ ಯಲ್ಲಟ್ಟಿ
12) ಬಸವೇಶ್ವರ ನೀ.ಬ.ಸ.ಸಂ. ಬಂಡಿಗಣಿ
13) ನೀರು ಬಳಕೆದಾರರ ಸಹಕಾರ ಸಂಘ ಆಸಂಗಿ
14) ಶಿವಲಿಂಗೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಕುಲ್ಲಳ್ಳಿ
15) ನೀರು ಬಳಕೆದಾರರ ಸಹಕಾರ ಸಂಘ ಆಲಬಾಳ
16) ಸಂಗಮೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಹಿಪ್ಪರಗಿ
17) ಗುರುಸಿದ್ರಾಮೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಹಿಪ್ಪರಗಿ

18) ಶಿವಾನಂದ ನೀರು ಬಳಕೆದಾರರ ಸಹಕಾರ ಸಂಘ ಮೈಗೂರ
19) ಭುವನೇಶ್ವರಿ ನೀರು ಬಳಕೆದಾರರ ಸಹಕಾರ ಸಂಘ ಶಿರಗುಪ್ಪಿ
20) ಬಸವೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಹಿಪ್ಪರಗಿ
21) ಮಹಾಲಕ್ಷ್ಮಿ ನೀರು ಬಳಕೆದಾರರ ಸಹಕಾರ ಸಂಘ ಹುನ್ನೂರ
22) ಮಹಾಲಕ್ಷ್ಮಿ ನೀರು ಬಳಕೆದಾರರ ಸಹಕಾರ ಸಂಘ ಕುಂಬಾರಹಳ್ಳಿ
23) ಮಹಾದೇವ ನೀರು ಬಳಕೆದಾರರ ಸಹಕಾರ ಸಂಘ ಕುಂಚನೂರ
24) ಘಟಪ್ರಭಾ ನೀರು ಬಳಕೆದಾರರ ಸಹಕಾರ ಸಂಘ ಮದರಖಂಡಿ
25) ಶ್ರೀ ದಿಗಂಬರೇಶ್ವರ ನೀರು ಬಳಕೆದಾರರ ಸಹಕಾರ ಸಂಘ ಮರೆಗುದ್ದಿ
26) ಶ್ರೀ ಕಾಡಸಿದ್ದೇಶ್ವರ ನೀರು ಬಳಕೆದಾರರ ಸಹಕಾರ ಸಂಘ ನಿಂಗನೂರ

536(874) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) :– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರಸ್ತುತ ವರ್ಷ ರಾಜ್ಯದಲ್ಲಿನ ವಸತಿ ಹೀನರಿಗೆ ವಸತಿ ಸೌಕರ್ಯ ನಿರ್ಮಿಸಿಕೊಂಡಿರುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಪ್ರಸ್ತುತ ವರ್ಷ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎನ್. ಚಲುವರಾಯಸ್ವಾಮಿ (ವಸತಿ ಸಚಿವರ ಪರವಾಗಿ):

ಅ) ಹೌದು.

ಆ) ಪ್ರಸ್ತುತ ವರ್ಷ: 2006–2007 ರಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿ 2,00,000 ಮನೆಗಳು. ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿ 20.000 ಮನೆಗಳು, ನಗರ ಆಶ್ರಯ ಯೋಜನೆಯಡಿ 30,000 ಮನೆಗಳು ಹಾಗೂ ಇಂದಿರಾ ಆವಾಸ್ ಯೋಜನೆಯಡಿ 50,000 ಮನೆಗಳು ಹೀಗೆ ಒಟ್ಟು ಮೂರು ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಇ) ಸರ್ಕಾರದ ವತಿಯಿಂದ 2005–06ನೇ ಸಾಲಿನಲ್ಲಿ ಈ ಕೆಳಗಿನಂತೆ ಮನೆಗಳ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

* **ಗ್ರಾಮೀಣ ಆಶ್ರಯ ಯೋಜನೆ** – ಪ್ರತಿ ಗ್ರಾಮ ಪಂಚಾಯತಿಗೆ 40 ಮನೆಗಳಂತೆ ಒಟ್ಟು 2,26,080 ಮನೆಗಳು
* **ಗ್ರಾಮೀಣ ಅಂಬೇಡ್ಕರ್ ಯೋಜನೆ** – 24,040 ಮನೆಗಳು
* **ನಗರ ಆಶ್ರಯ ಯೋಜನೆ** – 50,000 ಮನೆಗಳು

ಹಾಗೂ

2006–07ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ– 53,299 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ.